


بسم اللهِ الرّحمٰن الرّحيم

# ರಂಝಾನ್: ನಂಬಿಕೆ, ಪ್ರಾರ್ಥನೆಗಳು ಮತ್ತು ಸತ್ಕರ್ಮಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07–03–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಸೂರಃ ಬಖರದ 187ನೇ ವಚನ ಪಠಿಸಿ ಅದರ ಅರ್ಥ ವಿವರಿಸುತ್ತಾ ಹೀಗೆ ಹೇಳಿದರು:)*

وَاِذَا سَاَلَکَ عِبَادِیْ عَنِّیْ فَاِنِّیْ قَرِیْبٌ ؕ اُجِیْبُ دَعْوَۃَ الدَّاعِ اِذَا دَعَانِ فَلْیَسْتَجِیْبُوْا لِیْ وَلْیُؤْمِنُوْا بِیْ لَعَلَّهُمْ یَرْشُدُوْنَ ﴿۱۸۷﴾

ಅಲ್ಲಾಹನು ಹೇಳುತ್ತಾನೆ, ನನ್ನ ದಾಸರು ನನ್ನ ಬಗ್ಗೆ ನಿನ್ನೊಡನೆ ಕೇಳುವಾಗ, ಖಂಡಿತವಾಗಿಯೂ ನಾನು ಹತ್ತಿರದಲ್ಲಿದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರಿಸುತ್ತೇನೆ. ಆದ್ದರಿಂದ ಮಾರ್ಗದರ್ಶನ ಪಡೆಯಲಿಕ್ಕಾಗಿ ಅವರು ಸಹ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ.

(ಅನಂತರ ಹುಝೂರ್ ಹೇಳಿದರು:) ರಮಝಾನ್ ಪ್ರಾರಂಭವಾದ ಕೂಡಲೇ ಇದು ಅನುಗ್ರಹದ ತಿಂಗಳು ಎಂದು ನಮಾಝ್‌ಗಳ ಕಡೆಗೆ ಗಮನ ಹರಿಸುವ ಆಲೋಚನೆ ತಕ್ಷಣವೇ ಮನಸ್ಸಿನಲ್ಲಿ ಬರುತ್ತದೆ. ಆದ್ದರಿಂದ ಜನರು ಸಾಮಾನ್ಯವಾಗಿ ಮಸೀದಿಯ ಕಡೆಗೆ ಹೆಚ್ಚು ಬರುತ್ತಾರೆ. ಕನಿಷ್ಠ ಈ ದಿನಗಳಲ್ಲಿ ನಾವು ಅಲ್ಲಾಹನ ಕಡೆಗೆ ಹೋಗಬೇಕು ಎಂಬ ಯೋಚನೆ ಜನರಲ್ಲಿ ಉಂಟಾಗುವುದು ಅಲ್ಲಾಹನ ಅನುಗ್ರಹವಾಗಿದೆ.

ರಮಝಾನ್ ದಿನಗಳಲ್ಲಿ ನರಕದ ಬಾಗಿಲುಗಳನ್ನು ಮುಚ್ಚುತ್ತೇನೆ, ಶೈತಾನನನ್ನು ಬಂಧಿಸುತ್ತೇನೆ ಮತ್ತು ಸ್ವರ್ಗದ ಬಾಗಿಲುಗಳನ್ನು ತೆರೆಯುತ್ತೇನೆ ಎಂದು ಅಲ್ಲಾಹನು ಹೇಳುತ್ತಾನೆ. ಆದ್ದರಿಂದ ರಮಝಾನಿನಲ್ಲಿ ಮಾತ್ರ ಆರಾಧನೆಯ ಅಗತ್ಯವಿದೆ ಎಂದು ಜನರು ಭಾವಿಸುತ್ತಾರೆ. ಇದು ತಪ್ಪು ಭಾವನೆಯಾಗಿದೆ. ಅಲ್ಲಾಹನು ರಮಝಾನಿನಲ್ಲಿ ಆರಾಧನೆಯ ಕಡೆಗೆ ಗಮನ ಹರಿಸಲು ಹೇಳಿದ್ದು, ಅದನ್ನು ನಿಮ್ಮ ಜೀವನದ ಭಾಗವಾಗಿಸಿಕೊಳ್ಳಲಿಕ್ಕಾಗಿದೆ. ಇಲ್ಲದಿದ್ದರೆ, ಕೇವಲ ರಮಝಾನಿನ ಆರಾಧನೆಗಳಿಂದ ಯಾವುದೇ ಪ್ರಯೋಜನವಿಲ್ಲ.

ಹಝ್ರತ್ ಪೈಗಂಬರ್[ಸ] ಹೇಳಿರುವರು: ಪೂರ್ಣ ನಂಬಿಕೆಯೊಂದಿಗೆ ಮತ್ತು ಪ್ರತಿಫಲವನ್ನು ಪಡೆಯುವ ಉದ್ದೇಶದಿಂದ ರಮಝಾನ್ ರಾತ್ರಿಗಳಲ್ಲಿ ಎದ್ದು ನಮಾಝ್ ನಿರ್ವಹಿಸುವ ವ್ಯಕ್ತಿಯ ಹಿಂದಿನ ಪಾಪಗಳನ್ನು ಕ್ಷಮಿಸಲಾಗುವುದು.

ಅಲ್ಲಾಹನು ಬಹಳವಾಗಿ ಕ್ಷಮಿಸುವವನಾಗಿದ್ದಾನೆ, ಆದ್ದರಿಂದ ಅವನು ನಮಗೆ ಈ ಅವಕಾಶವನ್ನು ಒದಗಿಸುತ್ತಾನೆ, ಒಂದು ವರ್ಷದ ಅವಧಿಯಲ್ಲಿ ನಿಮ್ಮಿಂದ ತಪ್ಪುಗಳು ಸಂಭವಿಸಿದ್ದರೆ, ಇನ್ನು ಮುಂದೆ ಅಲ್ಲಾಹನ ಆರಾಧನೆಯ ಹಕ್ಕನ್ನು ಪೂರೈಸುವವರಾಗುತ್ತೇವೆ ಮತ್ತು ಅಲ್ಲಾಹನು ಆಜ್ಞಾಪಿಸಿದ ಎಲ್ಲ ಸತ್ಕಾರ್ಯಗಳನ್ನು ಈಡೇರಿಸುತ್ತೇವೆ ಎಂದು ಈಗ ಹೊಸದಾಗಿ ಪ್ರತಿಜ್ಞೆ ಮಾಡಿದರೆ ಮತ್ತು ಅದರಲ್ಲಿ ನೆಲೆನಿಲ್ಲಲು ಪ್ರಯತ್ನಿಸಿದರೆ ಖಂಡಿತವಾಗಿಯೂ ಅವನು ಅಪಾರ ಕರುಣೆಯೊಂದಿಗೆ ನಿಮ್ಮ ಕಡೆಗೆ ಗಮನಹರಿಸುವನು.

"ನನ್ನ ದಾಸರು ನಿನ್ನೊಡನೆ ಕೇಳುವಾಗ" ಎಂದು ಅಲ್ಲಾಹನು ಈ ವಚನದಲ್ಲಿ ಹೇಳುತ್ತಾನೆ. ಇಲ್ಲಿ ನನ್ನ ದಾಸರು ಎಂದರೆ ಅಲ್ಲಾಹನನ್ನು ಪ್ರೀತಿಸುವವರು ಎಂದಾಗಿದೆ ಅದರ ಅರ್ಥ. ಒಬ್ಬ ಪ್ರೇಮಿಯು ವರ್ಷದ ಹನ್ನೊಂದು ತಿಂಗಳು ಪ್ರೀತಿಯನ್ನು ವ್ಯಕ್ತಪಡಿಸದೆ ಇದ್ದುಕೊಂಡು ಕೇವಲ ಒಂದು ತಿಂಗಳು ಮಾತ್ರ ಪ್ರೀತಿಯನ್ನು ವ್ಯಕ್ತಪಡಿಸುವುದಿಲ್ಲ. ಆದ್ದರಿಂದ ನಾವು ಹೀಗೆ ಪ್ರಾರ್ಥಿಸುತ್ತಿರಬೇಕು: ಹೇ ಅಲ್ಲಾಹ್, ನಮಗೆ ನಿನ್ನ ಸಾಮೀಪ್ಯವನ್ನು ದಯಪಾಲಿಸು, ಸ್ವೀಕಾರಾರ್ಹವಾದ ಪ್ರಾರ್ಥನೆಗಳನ್ನು ಮಾಡುವ ಸೌಭಾಗ್ಯವನ್ನು ನಮಗೆ ನೀಡು.

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನ ಹಕ್ಕುಗಳ ಮತ್ತು ಮನುಷ್ಯರ ಹಕ್ಕುಗಳ ಕುರಿತು ಪದೇಪದೇ ಗಮನ ಸೆಳೆದಿದ್ದಾನೆ. ಹಝ್ರತ್ ಮಸೀಹ್ ಮೌಊದ್[ಅ] ಪವಿತ್ರ ಖುರ್‌ಆನಿನಲ್ಲಿ ಏಳುನೂರು ಆಜ್ಞೆಗಳಿವೆ ಎಂದು ಒಂದೆಡೆ ಹೇಳಿದ್ದಾರೆ. ಮತ್ತೊಂದೆಡೆ ಏಳುನೂರಕ್ಕೂ ಹೆಚ್ಚು ಆಜ್ಞೆಗಳಿವೆ ಎಂದಿದ್ದಾರೆ. ನಾವು ರಮಝಾನಿನಲ್ಲಿ ಪವಿತ್ರ ಖುರ್‌ಆನ್ ಓದುವಾಗ, ಅಲ್ಲಾಹನು ನಮಗೆ ನೀಡಿರುವ ಆಜ್ಞೆಗಳನ್ನು ಸಹ ಹುಡುಕುವೆವು. ನಾವು ಆ ಆಜ್ಞೆಗಳನ್ನು ಹುಡುಕುವಾಗ, ಅವುಗಳನ್ನು ಪಾಲಿಸಲು ಸಹ ಪ್ರಯತ್ನಿಸುವೆವು. ಇದೇ ನಿಜವಾದ ಪ್ರೇಮಿಯ ಕೆಲಸವಾಗಿದೆ.

ಸತ್ಯವಿಶ್ವಾಸ ಮತ್ತು ಸತ್ಕರ್ಮಗಳು ಜೊತೆ ಜೊತೆಯಾಗಿ ಸಾಗುವ ವಿಷಯಗಳಾಗಿವೆ ಎಂದು ಅಲ್ಲಾಹನು ಹೇಳಿರುವನು. ಅಲ್ಲಾಹನ ಮೇಲೆ ನಂಬಿಕೆ ಇರಿಸುವ ಮತ್ತು ಅವನ ಆದೇಶಗಳನ್ನು ಅನುಸರಿಸುವ ವ್ಯಕ್ತಿ ಅಲ್ಲಾಹನ ಸ್ನೇಹಿತನಾಗುತ್ತಾನೆ. ಅಲ್ಲಾಹನ ಮಿತ್ರನಾಗುವಾಗ ಅವನ ಸಾಮೀಪ್ಯ ಲಭಿಸುವುದು. ಅನಂತರ ಈ ಸಾಮೀಪ್ಯ ವರ್ಧಿಸುತಾ ಹೋಗುವುದು. ಈ ಸಾಮೀಪ್ಯವು ಒಂದೆಡೆ ನಿಲ್ಲುವಂತದ್ದಲ್ಲ. ಈ ಸಾಮೀಪ್ಯದ ಕಾರಣದಿಂದ ಅವನು ದುಆಗಳನ್ನು ಸಹ ಆಲಿಸುವನು. ಆದ್ದರಿಂದ, ರಮಝಾನಿನಲ್ಲಿ ಈ ಪದವಿಯನ್ನು ಗಳಿಸಲು ನಾವು ಪ್ರಯತ್ನಿಸಬೇಕು. ಅಲ್ಲಾಹನು ದುಆಗಳ ಸ್ವೀಕಾರಕ್ಕೂ ಕೆಲವು ಶರತ್ತುಗಳನ್ನು ಇಟ್ಟಿದ್ದಾನೆ. ಅವನ ದಾಸನಾಗಿರಬೇಕು ಎಂಬುದಾಗಿದೆ ಅದರ ಮೊದಲನೆಯ ನಿಬಂಧನೆ. ನಿಷ್ಠಾವಂತರಾಗಿ ಅವನನ್ನು ಆರಾಧಿಸಬೇಕು, ಅವನನ್ನು ಎಲ್ಲ ಶಕ್ತಿಗಳ ಮೂಲವೆಂದು ಪರಿಗಣಿಸಬೇಕು ಮತ್ತು ಯಾವುದೇ ಮಿಥ್ಯ ದೇವರುಗಳನ್ನು ಆರಾಧಿಸಬಾರದು. ಹಾಗಾದರೆ ಅದು ಶಿರ್ಕಿನ ಕಡೆಗೆ ಕೊಂಡುಹೋಗುವುದು. ಅತ್ಯಂತ ದೊಡ್ಡ ಸಂಗತಿ ಏನೆಂದರೆ, ಅಲ್ಲಾಹನೊಡನೆ ಅವನ ಕರುಣೆ ಮತ್ತು ಕೃಪೆಯನ್ನು ಬೇಡಬೇಕು ಮತ್ತು ಅವನ ಆದೇಶಗಳನ್ನು ಪಾಲಿಸಲು ಪ್ರಯತ್ನಿಸಬೇಕು.

ಸತ್ಕರ್ಮಗಳನ್ನು ಮಾಡಲು ಹಝ್ರತ್ ಪೈಗಂಬರ್(ಸ) ಅಸಂಖ್ಯಾತ ಬಾರಿ ನಮ್ಮ ಗಮನ ಸೆಳೆದಿದ್ದಾರೆ. ಹಝ್ರತ್ ಮಸೀಹ್ ಮೌಊದ್(ಅ) ಪದೇ ಪದೇ ಈ ಕುರಿತು ನಮ್ಮ ಗಮನವನ್ನು ಸೆಳೆದಿದ್ದಾರೆ. ಬೈಅತಿನ ಹತ್ತು ಶರತ್ತುಗಳಲ್ಲಿ ಹೆಚ್ಚಿನ ಶರತ್ತುಗಳೂ ಅಲ್ಲಾಹನ ಹಕ್ಕುಗಳು ಮತ್ತು ಮನುಷ್ಯರ ಹಕ್ಕುಗಳ ಕಡೆಗೆ ಗಮನ ಹರಿಸಬೇಕು ಎಂದಾಗಿದೆ. ಆದ್ದರಿಂದ ನಾವು ಈ ಕುರಿತು ಗಮನ ಹರಿಸಬೇಕಾಗಿದೆ. ನಾವು ಹಾಗೆ ಮಾಡುವಾಗ, ಅಲ್ಲಾಹನು ನಮ್ಮ ಮಿತ್ರನಾಗುವನು ಮತ್ತು ನಮ್ಮ ದುಆಗಳನ್ನು ಸಹ ಕೇಳುವನು. ಹಝ್ರತ್ ಪೈಗಂಬರ್(ಸ) ಹೇಳಿರುವರು: "ಸಹನೆಯಿಂದಿರುವ ಮತ್ತು ನಾನು ಬಹಳ ದುಆ ಮಾಡಿದ್ದೇನೆ, ಅಲ್ಲಾಹನು ಕೇಳುವುದೇ ಇಲ್ಲ ಎಂದು ಹೇಳದಿರುವ ಜನರ ದುಆಗಳನ್ನು ಅಲ್ಲಾಹನು ಆಲಿಸುತ್ತಾನೆ. ಹೀಗೆ ಹೇಳುವುದು ಕುಫ್ರ್ ಆಗಿದೆ ಮತ್ತು ಸತ್ಯವಿಶ್ವಾಸದಿಂದ ದೂರ ಕೊಂಡೊಯ್ಯುವ ಮಾತುಗಳಾಗಿವೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇದು ಇಬ್ಬರು ಸ್ನೇಹಿತರ ನಡುವಿನ ವಿಷಯವಾಗಿದೆ, ಕೆಲವೊಮ್ಮೆ ಸ್ನೇಹಿತನು ತನ್ನ ಸ್ನೇಹಿತನ ಮಾತನ್ನು ಒಪ್ಪಿಕೊಳ್ಳುತ್ತಾನೆ, ಕೆಲವೊಮ್ಮೆ ಸ್ನೇಹಿತನು ತನ್ನ ಮಾತನ್ನು ಒಪ್ಪುವಂತೆ ಮಾಡುತ್ತಾನೆ. ಅದೇ ರೀತಿ ಅಲ್ಲಾಹನು ವರ್ತಿಸುತ್ತಾನೆ, ಆದರೆ ಬಾಹ್ಯವಾಗಿ ಒಬ್ಬ ಸತ್ಯವಿಶ್ವಾಸಿಯ ಪ್ರಾರ್ಥನೆಯನ್ನು ಅಲ್ಲಾಹನು ತಿರಸ್ಕರಿಸುವಾಗಲೂ, ವಾಸ್ತವವಾಗಿ ಅಲ್ಲಾಹನು ಹಾಗೆ ಅವನ ಒಳಿತಿಗಾಗಿ ಮಾಡುತ್ತಾನೆ. ಹಝ್ರತ್ ಮಸೀಹ್ ಮೌಊದ್(ಅ) ಒಂದೆಡೆ ಹೇಳುತ್ತಾರೆ: ನನ್ನ ದಾಸರು ನನ್ನ ಬಗ್ಗೆ ಪ್ರಶ್ನಿಸುವಾಗ, ದೇವನ ಅಸ್ತಿತ್ವಕ್ಕೆ ಪುರಾವೆ ಏನು ಎಂದು ಕೇಳುವಾಗ ಆಗ ಅದರ ಉತ್ತರವೆಂದರೆ, ನಾನು ಬಹಳ ಹತ್ತಿರದಲ್ಲಿದ್ದೇನೆ, ಅಂದರೆ ದೊಡ್ಡ ಪುರಾವೆಗಳ ಅಗತ್ಯವಿಲ್ಲ, ನನ್ನ ಅಸ್ತಿತ್ವಕ್ಕೆ ಅತ್ಯಂತ ಸುಲಭವಾಗಿ ಪುರಾವೆ ಸಿಗುತ್ತದೆ. ಪುರಾವೆ ಏನೆಂದರೆ, ಪ್ರಾರ್ಥಿಸುವವನು ನನ್ನನ್ನು ಕರೆಯುವಾಗ, ನಾನು ಅವನ ಪ್ರಾರ್ಥನೆಯನ್ನು ಆಲಿಸುತ್ತೇನೆ ಮತ್ತು ದಿವ್ಯವಾಣಿಯ ಮೂಲಕ ಯಶಸ್ಸಿನ ಭರವಸೆಯನ್ನು ನೀಡುತ್ತೇನೆ.

ಪವಿತ್ರ ಖುರ್‌ಆನಿನಲ್ಲಿ "**ಯುಅ್‌ಮಿನೂನ ಬಿಲ್ ಗೈಬ್**" ಅಂದರೆ ಅದೃಶ್ಯದಲ್ಲಿ ನಂಬಿಕೆ ಇರಿಸುತ್ತಾರೆ ಎಂದು ಹೇಳಲಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಅದರ ಅತ್ಯಂತ ಸೂಕ್ಷ್ಮವಾದ ವಿವರಣೆಯನ್ನು ನೀಡುತ್ತಾ ಹೇಳುತ್ತಾರೆ: **ಗೈಬ್** ಎಂಬುದು ಸಹ ಅಲ್ಲಾಹನ ಒಂದು ಗುಣನಾಮವಾಗಿದೆ. ಪ್ರತಿಯೊಂದು ಪ್ರಾರ್ಥನೆಗೆ ಮೊದಲು ದೇವನು ಇದ್ದಾನೆ ಮತ್ತು ಅವನು ಅನಂತ ಗುಣಗಳನ್ನು ಹೊಂದಿದ್ದಾನೆ ಎಂಬ ನಂಬಿಕೆ ಇರಬೇಕು. ಈ ನಂಬಿಕೆಯೊಂದಿಗೆ ಅಲ್ಲಾಹನ ಕಡೆಗೆ ಧಾವಿಸುವಾಗ, ನಿಮಗೆ ಅಲ್ಲಾಹನ ನಿಜವಾದ ಪರಿಚಯವಾಗುತ್ತದೆ. ರಮಝ್ಝಾನಿನಲ್ಲಿ ಮಾತ್ರ ನಮಾಝ್‌ಗಳ ಕುರಿತು ಗಮನಿಸುವುದಲ್ಲ. ಅಲ್ಲಾಹನ ಕೃಪೆಯಿಂದ ಅಹ್ಮದಿಯರು ನಮಾಝಿನ ಕಡೆಗೆ ಬಹಳ ಗಮನಹರಿಸುತ್ತಾರೆ. ಆದರೆ ಇನ್ನೂ ದೌರ್ಬಲ್ಯಗಳಿವೆ.

ನಮ್ಮ ಆರಾಧನೆಗಳ ಗುಣಮಟ್ಟವನ್ನು ಹೆಚ್ಚಿಸುವ, ಅಲ್ಲಾಹನ ಸಾಮೀಪ್ಯವನ್ನು ನಮಗೆ ನೀಡುವ ರಮಝ್ಝಾನನ್ನಾಗಿ ಇದನ್ನು ನಾವು ಮಾಡಬೇಕು. ಹೀಗೆ ನಾವು ಅಲ್ಲಾಹನ ನಿಷ್ಠಾವಂತ ದಾಸರಾಗುವಂತಾಗಬೇಕು. ಆದ್ದರಿಂದ, ಈ ರಮಝ್ಝಾನಿನಲ್ಲಿ ನಾವು ನಮ್ಮ ಆರಾಧನೆಗಳನ್ನು ಜೀವಂತಗೊಳಿಸುವೆವು ಎಂದು ಪ್ರತಿಜ್ಞೆ ಮಾಡಬೇಕು ಮತ್ತು ಆ ಪ್ರತಿಜ್ಞೆಯನ್ನು ಪೂರೈಸಲು ಅಲ್ಲಾಹನು ನಮಗೆ ಶಕ್ತಿ ನೀಡಲಿ ಎಂದು ಅಲ್ಲಾಹನಲ್ಲಿ ಪ್ರಾರ್ಥಿಸಬೇಕು.

ಹಝ್ರತ್ ಪೈಗಂಬರ್(ಸ) ಹೇಳಿರುವರು, ಈಗಾಗಲೇ ಬಂದಿರುವ ಮತ್ತು ಬರಲಿರುವ ವಿಪತ್ತುಗಳಿಗೆ ದುಆವು ಪ್ರಯೋಜನವನ್ನು ನೀಡುವುದು. ಆದ್ದರಿಂದ ಅಲ್ಲಾಹನ ದಾಸರೇ, ನೀವು ದುಆ ಮಾಡುವುದನ್ನು ನಿಮ್ಮ ಮೇಲೆ ಕಡ್ಡಾಯಗೊಳಿಸಿರಿ.

ಕೇವಲ ರಮಝ್ಝಾನ್ ದಿನಗಳಲ್ಲಿ ಮಾತ್ರ ವಿಪತ್ತುಗಳು ಅಥವಾ ಕಷ್ಟಗಳು ಬರುವುದಲ್ಲ. ವಿವಿಧ ಸಮಯಗಳಲ್ಲಿ ಬರುತ್ತಲೇ ಇರುತ್ತವೆ, ಆದ್ದರಿಂದ ಕಷ್ಟಗಳು ಬರುವಾಗ ಮಾತ್ರ ದುಆ ಮಾಡುವವರಾಗಬೇಡಿರಿ ಎಂದು ಅಲ್ಲಾಹನು ಹೇಳುತ್ತಾನೆ. ಬದಲಿಗೆ ಹಝ್ರತ್ ಪೈಗಂಬರ್(ಸ) ಹೇಳಿರುವರು, ಇನ್ನೂ ಬರದ ಕಷ್ಟಗಳಿಂದಲೂ ರಕ್ಷಣೆ ಪಡೆಯಲು ದುಆ ಸಹಾಯಕವಾಗಿದೆ. ಆದ್ದರಿಂದ ನೀವು ನಿರಂತರವಾಗಿ ದುಆ ಮಾಡುತ್ತಿರಬೇಕು.

ಹಝ್ರತ್ ಪೈಗಂಬರ್(ಸ) ಹೇಳಿರುವರು: ನಮ್ಮ ಪ್ರಭು ಪ್ರತಿ ರಾತ್ರಿ ಹತ್ತಿರದ ಆಕಾಶಕ್ಕೆ ಇಳಿಯುತ್ತಾನೆ, ರಾತ್ರಿಯ ಮೂರನೇ ಒಂದು ಭಾಗ ಉಳಿದಿರುವಾಗ, ಅಲ್ಲಾಹನು ಹೇಳುತ್ತಾನೆ, ನನ್ನನ್ನು ಕರೆಯುವವರು ಯಾರಿದ್ದಾರೆ, ನಾನು ಅವನಿಗೆ ಉತ್ತರ ನೀಡುತ್ತೇನೆ. ನನ್ನಲ್ಲಿ ಬೇಡುವವರು ಯಾರು, ನಾನು ಅವನಿಗೆ ನೀಡುತ್ತೇನೆ. ನನ್ನಲ್ಲಿ ಕ್ಷಮೆಯನ್ನು ಬೇಡುವವರು ಯಾರು, ನಾನು ಅವನನ್ನು ಕ್ಷಮಿಸುತ್ತೇನೆ. ಇದು ರಮಝ್ಝಾನಿಗೆ ಮಾತ್ರ ಸೀಮಿತವಾಗಿಲ್ಲ. ಇಲ್ಲಿ ಸಾಮಾನ್ಯ ದಿನಗಳ ಬಗ್ಗೆ ಹೇಳಲಾಗುತ್ತಿದೆ. ಹಝ್ರತ್ ಪೈಗಂಬರ್(ಸ) ಹೇಳುತ್ತಾರೆ: ಕಷ್ಟಗಳ ಸಮಯದಲ್ಲಿ ಅಲ್ಲಾಹನು ತನ್ನ ಪ್ರಾರ್ಥನೆಗಳನ್ನು ಸ್ವೀಕರಿಸಬೇಕೆಂದು ಯಾರು ಬಯಸುತ್ತಾರೋ, ಅವರು ಸಮೃದ್ಧಿ ಮತ್ತು ಸುಖದ ಸಮಯದಲ್ಲಿ ಹೆಚ್ಚಾಗಿ ಪ್ರಾರ್ಥಿಸಬೇಕು. ಆದ್ದರಿಂದ, ಇವು ನಾವು ನೆನಪಿಟ್ಟುಕೊಳ್ಳಬೇಕಾದ ಬಹಳ ಮುಖ್ಯವಾದ ವಿಷಯಗಳಾಗಿವೆ. ನಾವು ಅಲ್ಲಾಹನೊಂದಿಗೆ ಸುದೃಢವಾದ ಸಂಬಂಧವನ್ನು ಹೊಂದಿರಬೇಕು.

ಹಝ್ರತ್ ಪೈಗಂಬರ್(ಸ) ಹೇಳುತ್ತಾರೆ: ಅಲ್ಲಾಹನು ಹೇಳುತ್ತಾನೆ, ನಾನು ದಾಸನ ಊಹೆಯ ಪ್ರಕಾರ ವರ್ತಿಸುತ್ತೇನೆ. ದಾಸನು ನನ್ನನ್ನು ನೆನಪಿಸಿಕೊಳ್ಳುವ ಸಮಯದಲ್ಲಿ ನಾನು ಅವನೊಂದಿಗೆ ಇರುತ್ತೇನೆ. ಅವನು ನನ್ನನ್ನು ತನ್ನ ಹೃದಯದಲ್ಲಿ ನೆನಪಿಸಿಕೊಂಡರೆ, ನಾನು ಅವನನ್ನು ನನ್ನ ಹೃದಯದಲ್ಲಿ ನೆನಪಿಸಿಕೊಳ್ಳುತ್ತೇನೆ. ಅವನು ನನ್ನನ್ನು ಸಭೆಯಲ್ಲಿ ಸ್ಮರಿಸಿದರೆ, ನಾನು ಅವನನ್ನು ಅದಕ್ಕಿಂತ ಉತ್ತಮವಾದ ಸಭೆಯಲ್ಲಿ ಸ್ಮರಿಸುತ್ತೇನೆ. ಅವನು ನನ್ನ ಕಡೆಗೆ ಒಂದು ಮೊಳದಷ್ಟು ಬಂದರೆ, ನಾನು ಅವನ ಕಡೆಗೆ ಒಂದು ಮಾರಿನಷ್ಟು ಬರುತ್ತೇನೆ. ಅವನು ನನ್ನ ಕಡೆಗೆ ಒಂದು ಅಡಿಯಷ್ಟು ಬಂದರೆ, ನಾನು ಅವನ ಕಡೆಗೆ ಎರಡು ಅಡಿಗಳಷ್ಟು ಬರುತ್ತೇನೆ. ಅವನು ನನ್ನ ಕಡೆಗೆ ನಡೆದುಕೊಂಡು ಬಂದರೆ, ನಾನು ಅವನ ಕಡೆಗೆ ಓಡಿಕೊಂಡು ಬರುತ್ತೇನೆ.

ಆದುದರಿಂದ ಪ್ರತಿಯೊಬ್ಬ ಅಹ್ಮದಿಯೂ ಅಲ್ಲಾಹನ ಸ್ಮರಣೆಯಿಂದ ತಮ್ಮ ನಾಲಿಗೆಗಳನ್ನು ತೇವವಾಗಿರಿಸಲು ಪ್ರಯತ್ನಿಸಬೇಕು ಮತ್ತು ನಮ್ಮ ಪ್ರತಿಯೊಂದು ಕೃತ್ಯ ಮತ್ತು ಪ್ರತಿಯೊಂದು ಕಾರ್ಯವು ನಮ್ಮನ್ನು ಅಲ್ಲಾಹನ ಕಡೆಗೆ ಸಾಗಿಸುವಂತಾಗಿರಬೇಕು.

ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹೀಗೊಂದು ವರದಿಯಿದೆ: ಧುನ್ನೂನ್ ಅಂದರೆ ಹಝ್ರತ್ ಯೂನುಸ್(ಅ) ಮೀನಿನ ಹೊಟ್ಟೆಯಲ್ಲಿ ಹೀಗೆ ದುಆ ಮಾಡಿದ್ದರು, "**ಲಾ ಇಲಾಹ ಇಲ್ಲಾ ಅಂತ**

**ಸುಬ್ಹಾನಕ ಇನ್ನೀ ಕುಂತು ಮಿನಝ್ಝಾಲಿಮೀನ್**" ಯಾವುದೇ ಮುಸ್ಲಿಮನು ಈ ದುಆವನ್ನು ಯಾವುದೇ ವಿಪತ್ತಿನ ಸಮಯದಲ್ಲಿ ಮಾಡಿದರೆ, ಅಲ್ಲಾಹನು ಖಂಡಿತವಾಗಿಯೂ ಆ ದುಆವನ್ನು ಸ್ವೀಕರಿಸುತ್ತಾನೆ.

ಅಲ್ಲಾಹನು ದಾಸರ ಮೇಲೆ ಕರುಣಾಮಯಿಯಾಗಿರುತ್ತಾನೆ. ಅವನು ಸ್ವತಃ ದಾಸರಿಗೆ ದುಆಗಳನ್ನು ಕಲಿಸಿದ್ದಾನೆ. ಪವಿತ್ರ ಖುರ್‌ಆನಿನಲ್ಲಿ ವಿವಿಧ ದುಆಗಳನ್ನು ಕಲಿಸಿರುವುದು ನಾವು ಈ ದುಆಗಳನ್ನು ಮಾಡಲಿಕ್ಕಾಗಿದೆ. ಹಾಗಿರುವಾಗ ಅಲ್ಲಾಹನು ಅವುಗಳನ್ನು ಖಂಡಿತವಾಗಿಯೂ ಅಂಗೀಕರಿಸುವನು, ಆದರೆ ನಿಬಂಧನೆ ಏನೆಂದರೆ ನಾವು ಮೊದಲು ಅವನ ಹಕ್ಕನ್ನು ಪೂರೈಸುವವರಾಗಿರಬೇಕು.

ಈ ದುಆದ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇದರಿಂದ ಅಲ್ಲಾಹನು ವಿಧಿಯನ್ನು ಬದಲಾಯಿಸುತ್ತಾನೆ ಎಂಬ ಒಂದು ಪಾಠ ಸಿಗುತ್ತದೆ. ಹಝ್‌ರತ್ ಯೂನುಸ್(ಅ)ರ ಜನರ ಘಟನೆಯಲ್ಲಿ ಉಲ್ಲೇಖಿಸಲಾದ ಅಳಲು, ಪ್ರಾರ್ಥನೆ ಮತ್ತು ದಾನಗಳು ಅಪರಾಧಕ್ಕೆ ವಿಧಿಸಲಾದ ಶಿಕ್ಷೆಯನ್ನು ದೂರ ಮಾಡುತ್ತದೆ. ಯಾರು ವಿಪತ್ತು ಬರುವುದಕ್ಕೆ ಮುಂಚೆ ದುಆ ಮಾಡುತ್ತಾರೋ ಮತ್ತು ಕ್ಷಮೆಯಾಚಿಸುತ್ತಾರೋ ಮತ್ತು ದಾನಗಳನ್ನು ಮಾಡುತ್ತಾರೋ ಅಂಥವರ ಮೇಲೆ ಅಲ್ಲಾಹನು ಕರುಣೆ ತೋರುತ್ತಾನೆ ಮತ್ತು ದೈವಿಕ ಶಿಕ್ಷೆಯಿಂದ ಅವರನ್ನು ರಕ್ಷಿಸುತ್ತಾನೆ.

(ಹುಝೂರ್ ಹೇಳಿದರು:) ಕೆಲವು ದಿನಗಳ ಹಿಂದೆ ನಾನು ದುಆಗಳನ್ನು ಮಾಡಲು ಮನವಿ ಮಾಡಿದ್ದೆ, ಅದರಲ್ಲಿ ಇಸ್ತಿಗ್‌ಫಾರ್ ಕಡೆಗೂ ಗಮನ ಸೆಳೆದಿದ್ದೆ. ಬಹಳ ಹೆಚ್ಚಾಗಿ ಇಸ್ತಿಗ್‌ಫಾರ್ ಮಾಡಿ. ನಿಷ್ಠಾವಂತರಾಗಿ ದುಆಗಳ ಕಡೆಗೆ ಗಮನ ನೀಡಿರಿ. ರಮಝಾನಿನ ನಂತರವೂ ದುಆಗಳಲ್ಲಿ ಮತ್ತು ಒಳಿತುಗಳಲ್ಲಿ ನೆಲೆನಿಲ್ಲಲು ಪ್ರಯತ್ನಿಸಬೇಕು. ಆಗ ಅಲ್ಲಾಹನು ಹೇಗೆ ಓಡಿಕೊಂಡು ನಮ್ಮ ಬಳಿಗೆ ಬರುತ್ತಾನೆ ಮತ್ತು ನಮ್ಮನ್ನು ಅಪ್ಪಿಕೊಳ್ಳುವನು ಎಂಬುದನ್ನು ನೀವು ನೋಡುವಿರಿ.

(ದುಆ ಮಾಡಲು ಮನವಿ ಮಾಡುತ್ತಾ ಹುಝೂರ್ ಹೇಳಿದರು:) ಇತ್ತೀಚಿನ ದಿನಗಳಲ್ಲಿ ಲೋಕದ ಕೆಲವು ಸ್ಥಳಗಳಲ್ಲಿ ಮತ್ತು ಪಾಕಿಸ್ತಾನದಲ್ಲಿಯೂ, ಬಾಂಗ್ಲಾದೇಶ ಮತ್ತು ಇತರ ಪ್ರದೇಶಗಳಲ್ಲಿಯೂ, ಆಲ್ಜೀರಿಯಾ ಮತ್ತು ಆಫ್ರಿಕಾದ ಕೆಲವು ದೇಶಗಳನ್ನೂ ಕೆಲವು ಕಿಡಿಗೇಡಿಗಳು ವಶಪಡಿಸಿಕೊಂಡಿದ್ದಾರೆ ಅಥವಾ ಆಕ್ರಮಿಸಿಕೊಂಡಿದ್ದಾರೆ ಮತ್ತು ಈ ಗುಂಪುಗಳಿಂದ ಸರ್ಕಾರಗಳು ಹೆದರಿ ಅವರ ಮಾತುಗಳನ್ನು ಒಪ್ಪಿಕೊಳ್ಳುತ್ತಿವೆ. ಆದ್ದರಿಂದ, ದೌರ್ಜನ್ಯ ಮಾಡುವವರಿಂದ ನಮಗೆ ಮುಕ್ತಿ ನೀಡು ಮತ್ತು ನೀನೇ ಸ್ವತಃ ಪ್ರತೀಕಾರವನ್ನು ಮಾಡು ಎಂದು ಅಲ್ಲಾಹನೊಡನೆ ನಾವು ದುಆ ಮಾಡಬೇಕು. ನಾವು ಈ ರೀತಿ ದುಆ ಮಾಡುವಾಗ ಅಲ್ಲಾಹನು ಒಂದು ದೊಡ್ಡ ಬದಲಾವಣೆಯನ್ನು ಉಂಟುಮಾಡುವನು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅನುಗ್ರಹವನ್ನು ಗಳಿಸಲು ಹತ್ತಿರದ ಮಾರ್ಗ ದುಆ ಆಗಿದೆ ಮತ್ತು ಪರಿಪೂರ್ಣ ದುಆದ ಲಕ್ಷಣಗಳೆಂದರೆ ಅದರಲ್ಲಿ ಕರಗುವಿಕೆ, ಕಳವಳ, ಅಳಲು ಇರಬೇಕು. ನಾವು ದುಆಗಳ ಕಡೆಗೆ ಬಹಳ ಗಮನ ಹರಿಸಬೇಕಾದ ಅಗತ್ಯವಿದೆ. ಈ ರಮಝಾನನ್ನು ದುಆಗಳ ಸ್ವೀಕಾರದ ರಮಝಾನನ್ನಾಗಿ ಮಾಡಿರಿ. ಇದು ನಮ್ಮಲ್ಲಿ ಪರಿಶುದ್ಧ ಬದಲಾವಣೆಯನ್ನು ಉಂಟುಮಾಡುವ ರಮಝಾನ್ ಆಗಲಿ. ಅಲ್ಲಾಹನು ಎಲ್ಲ ಎದುರಾಳಿಗಳಿಂದ ಮತ್ತು ಎಲ್ಲ ದೌರ್ಜನ್ಯಗಾರರಿಂದ ನಮಗೆ ಮುಕ್ತಿ ನೀಡಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis**(atba)*

At, ***'Masjid Mubarak'**, Islamabad, Tilford,* U.K. On 07-03-2025

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim | ***Layout**:* Basheer K.P. Manjeshwar

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon